RegdNo B G155 Sn 19—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅಂವಸಿಸಿಂಸ್ಥೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಿನಿರತ ಎಂ.ಎಸ್ ಕೃಷ್ಣರಾವ್ 2

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು ಕಚೇರಿ
B I C 153 / 64-65 ತಾ || 8-7-65

ಪ್ರ ಕ ಟ ಣೆ

ಈ ಮೂಲಕ ಸರ್ವ ಜನಗಳ ತಿಳುವಳಿಕೆ ಬಗ್ಗೆ ತಿಳಿಯಪಡಿಸುವುದೇನೆಂದರೆ—

ಈ ಟ್ರಸ್ಟ್ ಬೋರ್ಡಿನಿಂದ ಮಾರಾಟಕ್ಕೆ ಪ್ರಕಟಣೆಯಾಗುವ ಮನೆಗಳು ಮತ್ತು ನಿವೇಶನಗಳನ್ನು ಪಡೆಯುವ ಬಗ್ಗೆ ಪಾವತಿ ಮಾಡಬೇಕಾದ ಪ್ರಥಮ ಠೇವಣಿ (E.M.D.) ಮೊಬಲಗುಗಳನ್ನು ಹಾಲಿ ಬೋರ್ಡು ಕಚೇರಿಯಲ್ಲಿ ಸಂದಾಯ ಮಾಡುತ್ತಿರುವುದು ಸರಿಯಾಗಿದೆ. ಸದರಿ ಠೇವಣಾತಿಗಳನ್ನು ಇನ್ನು ಮುಂದೆ ಎಂದರೆ 1-8-1965 (ಒಂದು ಸಾವಿರದ ಒಂಭೈನೂರ ಅರವತ್ತೈದನೇ ಇಸವಿ ಆಗಸ್ಟ್ ಮಾಹೆ ಒಂದನೆ ತಾರೀಖಿನಿಂದ) ಸ್ಟೇಟ್ ಬ್ಯಾಂಕ್ ಮೈಸೂರು ಶಾಖೆ (ಸರ್ಕಾರಿ ವಿಭಾಗ) ಯಲ್ಲಿ ಪಾವತಿಮಾಡಲು ಏರ್ಪಡಿಸಿರುತ್ತೆ. ಠೇವಣಿಗಳನ್ನು ಪಾವತಿಮಾಡಶಕ್ಕವರು ಬೋರ್ಡು ಕಚೇರಿಯಿಂದ ದ್ವಿಪ್ರತಿ ಚಲನ್ನುಗಳನ್ನು ಪಡೆದು ಅದರಲ್ಲಿ ' ಮೈಸೂರು ಸಿಟಿ-ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ' ಪ ಲೆಕ್ಕಕ್ಕಾಗಿ ಪಾವತಿ ಎಂದು ನಮೂದಿಸಿ, ಬೋರ್ಡು ಕಚೇರಿಯಲ್ಲಿ ಈ ಬಗ್ಗೆ ಹಣ ತುಂಬಿಸಿಕೊಂಡು ಮೇಲ್ಕಂಡ ಬ್ಯಾಂಕಿನಲ್ಲಿ ಹಣ ಪಾವತಿ ಮಾಡಶಕ್ಕದ್ದು ಮತ್ತು ಹಾಗೆ ಪಾವತಿ ಮಾಡಿದ ನಂತರ ಬ್ಯಾಂಕಿನ ಲೆಕ್ಕಕ್ಕೆ ಜಮಾ ಆದ ತರುವಾಯ ಹಣ ಸಂದಾಯ ಮಾಡಿದ ಚಲನ್ನಿನ ಎಂಡಸೆಯ ಪ್ರತಿಯನ್ನು ಬೋರ್ಡು ಛೇರ್‌ಮನ್ನರವರಿಗೆ ಸಲ್ಲಿಸುವ ತಮ್ಮ ವಿಧಾಯಕವಾದ ಅರ್ಜಿಗಳೊಡನೆ ಲಗತ್ತಿಸಿ, ಅರ್ಜಿಗಳಲ್ಲಿ ಹಣ ಸಂದಾಯದ ಚಲನ್ ನಂಬರು, ತಾರೀಖು, ಕೋರಿರುವ ನಿವೇಶನ ಅಥವಾ ಕಟ್ಟಡಗಳ ಬಗ್ಗೆ, ಠೇವಣಿ ಮೊಬಲಗು, ಇವುಗಳನ್ನು ಕರಾರುವಾಕ್ಕಾಗಿ ನಮೂದಿಸಿ ಹಾಜರ್ ಪಡಿಸಕ್ಕದ್ದು. ಅರ್ಜಿಯೊಡನೆ ಲಗತ್ತಿಸಿದ ಸದರಿ ಹಣ ಸಂದಾಯದ ಚಲನ್ನನ್ನು ಬೋರ್ಡು ಕಚೇರಿಯಲ್ಲಿ ಪರಿಶೀಲಿಸಿಕೊಂಡನಂತರ ಅರ್ಜಿದಾರರ ಹಾಜರಿಲೆ ಬಗ್ಗೆ ಅದನ್ನು ಅವರಿಗೆ ಹಿಂತಿರುಗಿಸಲಾಗುವುದು. ಅದ್ದರಿಂದ ಸಂಬಂಧಪಟ್ಟವರು ತಾರೀಖು 1-8-1965 ರಿಂದ ಬದಲಾವಣೆಯಾಗುವ ಮೇಲ್ಕಂಡ ಪಡೆವಳಿಕೆಯನ್ನು ಅರಿತುಕೊಂಡು ಅದಂತೆ ನಡಕೊಳ್ಳಬೇಕಾಗಿ ಕೋರಿದೆ.

B. Narayana Swamy
ಛೇರ್‌ಮೆನ್

ಗೌರ್ನರರಿಗೆ ಹೊರ ಸನ್ಮಾನ

ಮೈಸೂರು— ಮೈಸೂರಿನ ಗೌರ್ನರವರು ಶ್ರೀ ಎ ವಿ ಗಿರಿಯವರಿಗೆ ಮೈಸೂರು ಪೌರಸಭೆಯವರು ತಾ || 29 ರಂದು ಸಂಜೆ 5-30 ಕ್ಕೆ ಟೌನ್‌ಹಾಲಿನಲ್ಲಿ ಪೌರಸನ್ಮಾನಪತ್ರಕ್ಕೆ ಅರ್ಪಿಸುವರು.

ಆರೋಗ್ಯ ಸಪ್ತಾಹ

ಮೈಸೂರು— ಪೌರಸಭೆಯವರು ಏರ್ಪಡಿಸಿರು ಆರೋಗ್ಯ ಸಪ್ತಾಹದ ಕಾರ್ಯಕ್ರಮದಂತೆ, ತಾ || 17 ರಂದು ಪೌರಸಭಾಧ್ಯಕ್ಷ ಶ್ರೀ ವೆಂಕಟಲಿಂಗಯ್ಯ ಸರವರಿಂದ ದೇವರಾಜ ಮಾರ್ಕೆಟ್ಟಿನ ಪಡಿಪ್ಪನ್ನು ಫೋಟಿನ ಹತ್ತಿರ ಉದಘ್ಘಾಟಿಸಲಾಯಿತು. ಅಧ್ಯಕ್ಷರೂ ಮತ್ತು ಕೆಲವು ಸದಸ್ಯರೂ ವಾಸ್ತವ್ಯವಾಗಿ ಗುಡಿಸಿದರು.

ತಾ 18 ರಂದು ಆರೋಗ್ಯ ಸಪ್ತಾಹವು ಸೆಂಟ್ರಲ್ ಕಛೇರಿಯಲ್ಲಿ ಆಚರಿಸಲಾಯಿತು. ಇಂದು ಜಾತಿಮಂತಾಜ ಮೊಹಲ್ಲಾ ಕಾಕಂಕೇರಿಯಲ್ಲಿ ಆಡಂಸಲಾಯಿತು

ಗೋವಾ ನಿರ್ಧಾರ ಬಗ್ಗೆ ಭಾರಿ ಪ್ರತಿಭಟನೆ

ಮೊಚ್ಚಿಟ್ಟಿದ್ದ ಮೊವಿನಹಣ್ಣು ವ್ಯತ್ಯ ತಂದಿತು

ಮಡಿಕೇರಿ— ಇಲ್ಲಿ 10 ಮೈಲಿ ದೂರದ ವುಬಂಗ್ಯಾವಂದಲ್ಲಿ ಒಬ್ಬ ಮಹಿಳೆ ಒಂದು ಮೊವಿನಹಣ್ಣನ್ನು ಒಂದು ಮಡಕೆಯೊಳಗೆ ಮುಚ್ಚಿಟ್ಟು, ನದಿಗೆ ಸ್ನಾನಕ್ಕಾಗಿ ತನ್ನ ಚಿಕ್ಕ ಮಗುವನ್ನು ಎತ್ತಿಕೊಂಡು ಹೋದಳು ; ಆ ವಣ್ಣನ್ನ ತೆಗೆದುಕೊಳ್ಳಲು ಅವಳ ಇಬ್ಬರು ಮಕ್ಕಳುಗಳು ಅಲ್ಲಿಗೆ ಹೋದವು ; ಅಲ್ಲಿಗೆ ಹರಿದುಬಂದಿದ್ದ ಹಾವು ಅವರನ್ನು ಕಚ್ಚಿತು : ಈ ವರ್ತಮಾನವನ್ನು ಕೇಳಿದ ತಾಯಿ ಚಿಕ್ಕ ಮಗುವನ್ನು ನದಿಯ ದಂಡೆಯ ಹತ್ತಿರ ಬಿಟ್ಟುಬಟ್ಟು ಮನೆಗೆ ಓಡಿಬಂದಳು ; ಎರಡು ಹುಲ್ಲೆಗಳು ಸತ್ತುಬಿದ್ದಿದ್ದನ್ನು ಕಂಡು ಅತಿ ವ್ಯಸನಾಕ್ರಾಂತಳಾದಳು : ಜೊತೆಗೆ ನದೀ ದಡದಲ್ಲಿ ಬಿಟ್ಟುಬಂದಿದ್ದ ಮಗುವೂ ನದೀಪಾಲಾಗಿ ಕಾಣೆಯಾಯಿತು

ಎಲ್ ಐ ಸಿ

ನವದೆಹಲಿ— ಜೀವವಿಮಾ ಕಾರ್ಪೊರೇಷನ್ನಿನ 65—66 ರ ಹಣಕಾಸು ವರ್ಷದ ಮೊದಲನೆಯ ಮೂರು ತಿಂಗಳಲ್ಲಿ ಹೊಸದಾಗಿ 93-92 ಕೋಟಿ ರೂಗಳಷ್ಟು ಜೀವವಿಮಾ ವ್ಯವಹಾರ ನಡೆದಿದೆ — ಜೂನು ತಿಂಗಳಲ್ಲಿ ಮಾತ್ರವೇ 42.33 ಕೋಟಿ ರೂಗಳಷ್ಟು ಜೀವವಿಮಾ ವ್ಯವಹಾರ ನಡೆದಿದೆ — ಜೀವವಿಮಾ ವ್ಯವಹಾರದಲ್ಲಿ ದಕ್ಷಿಣ ವಲಯವು ಇತರ ವಲಯಗಳಿಗಿಂತ ಅಗ್ರಸ್ಥಾನದಲ್ಲಿದೆ.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ ಸಂಪಕ್ಕ ಕೃಷ್ಣಜೋಯಿಸರಿಂದ

20 ಮಂಗಳವಾರ ಸಪ್ತಮಿ ಉ ಭಾ

ಬೆಂಗಳೂರು— ಗೋವಾ ಬಗ್ಗೆ ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡಿನ ತೀರ್ಮಾನವು ಕನ್ನಡಿಗರಿಗೆ ತೀರ ಅನ್ಯಾಯವಾಗಿದೆಯೆಂಬುದನ್ನು ಇಲ್ಲಿ ನಿನ್ನೆ ಬೆಳಿಗ್ಗೆ ನಡೆದ ಸಾರ್ವಜನಿಕ ಸಭೆಯಲ್ಲಿ ವ್ಯಕ್ತಪಡಿಸಲಾಯಿತು : ಶ್ರೀ ಟಿ ಟಿ ಶರ್ಮರು ಪ್ರಾರಂಭದಲ್ಲಿ, ಕನ್ನಡಿಗರ ಮತ್ತು ಗೋವಾದ ಸಂಬಂಧವನ್ನು ವಿವರಿಸಿ, ಈಗಿನ ತೀರ್ಮಾನವನ್ನು ಕಟುಪದಗಳಿಂದ ಟೀಕಿಸಿದರು ; ಶ್ರೀ ಶಿವಮೂರ್ತಿಶಾಸ್ತ್ರಿಗಳು ಮಾತನಾಡಿ ಗೋವಾ ವಿಷಯದಲ್ಲಿ ಕರ್ನಾಟಕದ ಜನತೆಯು ಒಗ್ಗಟ್ಟಾಗಿ ಮೈಸೂರಿಗೆ ಸೇರಿಸಲ್ಪಡಬೇಕೆಂದು ; ಮಿಕ್ಕ ಭಾಷಣಕಾರರೂ ಪ್ರತಿಭಟಿಸಿದರು : — ಗೋವಾ ವಿಷಯದಲ್ಲಿ ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡಿನ ನಿರ್ಧಾರವನ್ನು ಪ್ರತಿಭಟಿಸಲು ಕನ್ನಡ ಜಿಲ್ಲೆಗಳಾದ್ಯಂತ ವಿರ್ಗಡಿಸಿದ್ದ ರ್ಯಾಲಿಯು ಸ್ಟೇಟು ಬ್ಯಾಂಕು ಚೌಕದಲ್ಲಿ ನಿನ್ನೆ ಸಂಜೆ ನಡೆಯಿತು — ಜನತೆ ಏಐಸಿಸಿಯನ್ನು ಒಹಿಷ್ಕರಿಸಬೇಕೆಂದು ಒತ್ತಾಯ ಮಾಡಲಾಯಿತು — ಇದಕ್ಕೆ ಮೊದಲು ಶ್ರೀ ವಿಶಲ್ ನಾಗರಾಜ್ ಪತ್ರಿಕರರು ಸುಭಾಷ ಮೈದಾನದಿಂದ ಮುಖ್ಯ ರಸ್ತೆಗಳಲ್ಲಿಲ್ಲಾ 6 ಮೈಲಿ ಭಾರಿ ಮೆರವಣಿಗೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಟೀಕಿಸಿದರು — ಗೋವಾ ಮುಖ್ಯ ಮಂತ್ರಿ ಶ್ರೀ ಧರಿಡೇಷ್ಕರ್‌ರವರ ಚಿತ್ರಪಟವು ಸುಡಲ್ಪಟ್ಟಿತು.

ಕೊಂಕಣಿಗಳ ವಿರೋಧ

ಬೆಂಗಳೂರು— ಗೋವಾ ಸಮಸ್ಯೆ ಪರಿಹಾರಕ್ಕೆ ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡು ಮಾಡಿರುವ ಅಸುರ ಕಾರ್ಯವನ್ನು ನಿಲ್ಲಿಯ ಕೊಂಕಣಿ ಮಾತಾಡುವವರು ತೀವ್ರ ಪ್ರತಿಭಟಿಸಿರುವರು.

ಆಹಾರ ಸಮಸ್ಯೆ

(ಲೇಖಕರು — ಶ್ರೀ ಅನಂತನರಸಿಂಹಸ್ವಾಂಗಾರ್, ಹೊಂಗನೂರು)

*

(ಮುಂದುವರಿದುದು)

ಸ್ವಂತ ಎತ್ತುಗಾಡಿಗಳನ್ನಿಟ್ಟು ವ್ಯವಸಾಯ ಮಾಡುವವರೂ ಕೂಡ ಕೆಲವು ಸಮಯಗಳಲ್ಲಿ ಉಳಲು ಇತರರ ಬಾಡಿಗೆ ಎತ್ತುಗಳನ್ನು ಅವಲಂಬಿಸಬೇಕಾಗುತ್ತದೆ ; ಕಳೆ ತೆಗೆಯಲು ಹಣ ಕೊಟ್ಟು ಆಳುಗಳನ್ನು ನೇಮಿಸಬೇಕಾಗುತ್ತದೆ : 1940 ನೇ ವರ್ಷದಲ್ಲಿ ಇದ್ದುದಕ್ಕಿಂತ ಎಷ್ಟು ಪಟ್ಟಿನ ಹೆಚ್ಚಿನ ಕಂಬಳ ಉಳುಮೆ ಎತ್ತುಗಳಿಗೂ, ಅಂತು ಪಟ್ಟು ಹೆಚ್ಚಿನ ಕಂಬಳ ಕಳೆ ತೆಗೆಯುವ ಆಳುಗಳಿಗೂ ಕೊಡಬೇಕಾಗಿದೆ : ಈ ರೀತಿಯ ಬಾಡಿಗೆ ಏನಿವರು ಎಷ್ಟೇ ಪ್ರಯತ್ನಪಟ್ಟರೂ, ಎಷ್ಟು ಹೇಳಿದರೂ ಮನ್ಪೂರ್ವಕವಾಗಿ ಆಳುವಾಗಿ ಉಳುವುದಿಲ್ಲ ; ಕಳೆ ತೆಗೆಯುವ ಆಳುಗಳು ಸಂಯಾಗಿ ಕಳೆ ತೆಗೆಯುವುದಿಲ್ಲ : ಇದರಿಂದ ಪೈರು ಸರಿಯಾಗಿ ಬೆಳೆಯಲು ಅವಕಾಶವಾಗದೆ ಬೆಳೆ ಕಮ್ಮಿಯಾಗುತ್ತದೆ : ಇದಕ್ಕೆ ಅವರ ಸೋಮಾರಿತನ ಹಾಗೂ ಅವ್ಯವಸ್ಥಿತನವೇ ಆಗಿದೆ : ಮುಂದೆ ಸಹಕಾರಿ ಕೃಷಿ ಪದ್ಧತಿ ಏನಾದರೂ ಎಲ್ಲಾ ಕಡೆಯಲ್ಲಿಯೂ ಬಂದಲ್ಲಿ ಈ ಮಟ್ಟದಲ್ಲಿ ಅನಾಧ್ಯ ಧ್ವನ್ಯಾಚಾರ ನಡೆದು ಧಾನ್ಯದ ಇಳುವರಿ ಈಗ ಇರುವುದಕ್ಕಿಂತಲೂ ಕಡಮೆಯಾಗುವ ಸಾಧ್ಯತೆ ಇದೆ : ಇದು ಪರಿಹಾರವಾಗಬೇಕಾದರೆ ಜನಗಳಲ್ಲಿ ಧರ್ಮ ಪ್ರಚಾರ ನಡೆದು ಪ್ರಾಮಾಣಿಕರನ್ನಾಗಿ ಮಾಡುವ ಏಕ ಮಾತ್ರ ಕಾರ್ಯ ಮಾತ್ರವೇ ಪರಿಹಾರ ನೀಡಬಲ್ಲದು.

ವ್ಯವಸಾಯ ಕಾರ್ಯಗಳೆಲ್ಲಾ ಮುಗಿದು ಸುಗ್ಗಿಯ ಕಾಲ ಪ್ರಾರಂಭವಾಯಿತೆಂದರೆ ಎಲ್ಲರಿಗಿಂತಲೂ ಮುಂಜಾನೆ ಕಳ್ಳರಿಗೆ ಸುಗ್ಗಿ ಪ್ರಾರಂಭವಾಗುತ್ತದೆ ; ಚಿಕ್ಕ ಬಾಲಕ ಬಾಲಕಿಯರು ಧಾನ್ಯದ ತೆನೆಯನ್ನು ಊರಿ ದಿನ 2-3 ಸೇರಿನಷ್ಟು ಧಾನ್ಯವನ್ನು ಸೇರಿಸಿ ಆಂಗಡಿಗಳಲ್ಲಿ ಮಾರಿ ತಿಂಡಿ ತಿನ್ನುತ್ತಾರೆ ; ದೊಡ್ಡವರು 8-10 ಜನ ಸೇರಿ ಗದ್ದೆಗಳಿಗೋ ಹೊಲಗಳಿಗೋ ರಾತ್ರಿವೇಳೆ ಹೋಗಿ ಧಾನ್ಯವನ್ನು ಕಾಯಿದು ಬಕ್ಕಣೆ ಮಾಡಿಕೊಳ್ಳುತ್ತಾರೆ ; ಹುಲ್ಲಿನ ಸಹಿತ ಗುಡ್ಡೆಹಾಕಿರುವ ವೆದೆಗಳಿಂದ ನೂರಾರು ರೂಗಳು ಬೆಲೆ ಬಾಳುವ ಧಾನ್ಯಗಳನ್ನು ಕದ್ದು ತೆಗೆದುಕೊಂಡು ಹೋಗುತ್ತಾರೆ ; ಈಚೆಗೆ ಕೆಲವು ಗ್ರಾಮಗಳಲ್ಲಿ 20-30 ಜನರುಗುಂಪು ಜವಾನರುಗಳಿಗೆ ರಾತ್ರಿ ವೇಳೆ ಮುತ್ತಿಗೆ ಹಾಕಿ ನೂರಾರು ರೂಪಾಯಿಗಳ ಧಾನ್ಯ ಅಥವಾ ತೆಂಗಿನಕಾಯಿ ಮುಂತಾದ ಪದಾರ್ಥಗಳನ್ನು ದರೋಡೆ ಮಾಡಿಕೊಂಡು ಹೋಗುತ್ತಿರುವ ಸಮಾಚಾರಗಳು ಬರುತ್ತಿವೆ ; ರೈತನ ಆತ್ಮಾಹುತಿಯನ್ನೇ ಹಾಳು ಮಾಡುತ್ತಿರುವ ಈ ಸಮಸ್ಯೆಯೇ ಇಂದಿನ ಅತಿ ಮುಖ್ಯವಾದ ಸಮಸ್ಯೆಯಾಗಿದೆ : ಧರ್ಮಪ್ರಚಾರದಿಂದ ಜನಗಳಲ್ಲಿ ಪ್ರಾಮಾಣಿಕತೆಯನ್ನುಂಟುಮಾಡುವುದು, ಗೃಹ ಜಿಲ್ಲಾಪೆಯವರು ಇದರ ಬಗ್ಗೆ ಬಹಳ ಮುತುವರ್ಜಿ ವಹಿಸಿ ಧಾನ್ಯವನ್ನು ಕಳುವ ಕಳ್ಳರನ್ನು ಹಿಡಿದು ಅತ್ಯಗ್ರವಾಗಿ ಶಿಕ್ಷೆ ಮಾಡುವುದು ಮುಂತಾದ ಕ್ರಮಗಳಿಂದ ಇದನ್ನು ಶಕ್ಯಮಟ್ಟಿಗೆ ತಹಬಂದಿಗೆ ತರಬಹುದಾಗಿರುತ್ತೆ.

[ಮುಂದುವರಿಯುವುದು]

Qdality Printing — Neat Binding

Lakshminarasimha Press

Sivarampet, Mysore

ಗೋರಕ್ಷಣೆಗೆ ಬೆಂಬಲ ನೀಡಿ

—o—

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವುಡಲಾಂಡ್ಸ್ ಮಹಿಮಾನ್ವಿತ 9 ನೇ ವಾರ

ಜಾನ'ವರ' Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ
ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು
ಹಾಸ್ಯ ವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದೀ ಚಿತ್ರ

ಅಪೆರ— ಯಶಸ್ವಿ 4 ನೇ ವಾರ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲ್ಲವನಕ್ಕು ವಲವನ'

ನಟವರ್ಗ— ಜಮಿನಿ ಗಣೇಶ್, ಸಾವಿತ್ರಿ, ಕಂಗವೇಲು, ಅಶೋಕ್
ಮುಕ್ತುಲಕ್ಷ್ಮಿ ಮನೋರಮ [ಪ್ರತಿ ದಿನ 3 ಆಟಗಳು]

SHAKTI
SUDHA

A Superb Tonic

Protect the Cow



ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma prachare niratha
M S Krishna Rao (Proprietor) at the Satyavadi Press
Chamarajapuram, Mysore 4